# ರಾಮನ್ ಸಾಧನೆ ಕುರಿತ ಪ್ರದರ್ಶನ

ಬೆಂಗಳೂರು ಸೆ, 9- ನೋಬೆಲ್ ಪಾರಿತೋಷಕ ವಿಜೇತ ಡಾ॥ ಸರ್ ಸಿ ವಿ ರಾಮನ್ ಒಬ್ಬ ಪೂರ್ಣ ಮಟ್ಟದ ವಿಜ್ಞಾನಿ ಅವರು ಕಂಡುಹಿಡಿದ ರಾಮನ್ ಪರಿಣಾಮ (effect) ಅವರ ವೈಜ್ಞಾನಿಕ ಸಂಶೋಧನೆಯ ಒಂದು ಭಾಗ ಮಾತ್ರ.

ರಾಮನ್ ಪರಿಣಾಮ್ರ ಕಂಡು ಹಿಡಿದ 50ನೇ ವಾರ್ಷಿಕೋತ್ಸವದ ಅಂಗವಾಗಿ ರಾಮನ್ ಸಂಶೋಧನಾ ಸಂಸ್ಥೆಯಲ್ಲಿ ಏರ್ಪಡಿಸಿರುವ ರಾಮನ್ ಅವರ ಜೀವನ ಪ್ರಯೋಗ ಕುರಿತ ವಸ್ತು ಪ್ರದರ್ಶನ ವೀಕ್ಷಿಸಿದವರಿಗೆ ಸತ್ಯ ಸಂಗತಿ ಅರಿವಾಗದಿರದು,

ಭಾವ ಚಿತ್ರಗಳ ಮೂಲಕ ರಾಮನ್ ಅವರ ಪೂರ್ವಿಕರ ಗ್ರಾಮ ಕುಟುಂಬ ಬಾಲ್ಯ ಶಿಕ್ಷಣ ಸಂಶೋಧನೆ ನೋಬೆಲ್ ಪಾರಿತೋಷಕಗಳಿಗೆ ಇತ್ಯಾದಿಗಳನ್ನು ವಿವರಿಸಲಾಸಗಿದೆಅವರು ಪ್ರಯೋಗಕ್ಕೆ ಬಳಸಿದ ಉಪಕರಣಗಳು ಭಾರತೀಯ ಮೃದಂಗ ವೀಣೆಗಳಿಗೆ ವಿ ನೂ ತ ನ ಮಾ ರ್ಧ ಯ ಅಳವಡಿಸಿರುವುದು ಹಾಗೂ ಅವರು ಶೇಖರಿಸಿರುವ ಸಾವಿರಕ್ಕೂ ಹೆಚ್ಚು ಮಾಣಿಕ್ಯ ಹಾಗೂ ವಿವಿಧ ಖನಿಜಗಳು ಪ್ರದರ್ಶಿತವಾಗಿದೆ

ಸಿ ವಿ ರಾಮನ್ ವಿಜ್ಞಾನಿ ಮಾತ್ರವಲ್ಲ. ಉತ್ತಮ ತೋಟಗಾರ, ನಾದ ಪ್ರಿಯ, ಪತ್ರಕರ್ತ, ಗಾಂಧೀಪ್ರಿಯ, ಮಾನವತಾವಾದಿ, ವಿಜ್ಞಾನದ ವಿಕರಣೆಕಾರ ಎಂಬ ಮುಖಗಳನ್ನು ಈ ಪ್ರದರ್ಶನ ತೋರಿಸುತ್ತದೆ

ಜಪಾನಿನ ಹಿರೋಶಿಮಾದ ಮೇಲೆ ಬಾಂಬ್ ಬಿದ್ದ ಅವಧಿಯ ಎರಡು ಬರಳು ಕಲ್ಲುಗಳನ್ನು ಬಾಂಬ್ ವಿರೋಧಿಯಾದ ರಾಮನ್ ಅವರಿಗೆ ಅಲ್ಲಿನ ಜನರು ಕಾಣಿಕೆಯಾಗಿ ಕಳುಹಿಸಿರುವುದು ಈ ಪ್ರದರ್ಶನದಲ್ಲಿ ಪ್ರದರ್ಶಿತವಾಗಿದೆ

ಈ ಪ್ರದರ್ಶನವನ್ನು ಸೆಪ್ಟೆಂಬರ್ 12(ಮಂಗಳವಾರ)ರಿಂದ ಭಾನುವಾರ ಸೆ 17 ರವರೆಗೆ ಸಾರ್ವಜನಿಕರಿಗಾಗಿ ತೆರೆಯಲಾಗಿದೆ. ಮಕ್ಕಳಿಗೆ ಚಾರ್ಜ್ ಇಲ್ಲ ಪ್ರದರ್ಶನ ವೇಳೆ ಮಂಗಳವಾರದಿಂದ ಶುಕ್ರವಾರದವರೆಗೆ ಮಧ್ಯಾಹ್ನ 2-30ರಿಂದ ಸಂಜೆ 6-30, ಶನಿವಾರ, ಭಾನುವಾರಗಳಲ್ಲಿ ಬೆಳಗ್ಗೆ 9-30ರಿಂದ ಸಂಜೆ 5 ಪ್ರದರ್ಶನ ಸ್ಥಳ ಮೇಖ್ರಿ ವೃತ್ತದ ಬಳಿಯಿರುವ ರಾಮನ್ ಸಂಶೋಧನಾ ಸಂಸ್ಥೆ.